

## ಪ್ರೇರಣೆಯಾದ ಮಾತುಗಳು...

ಎಳವೆಯಲ್ಲೇ ನನ್ನ ಮೇಲೆ ಅತ್ಯಂತ ಪ್ರಭಾವ ಬೀರಿದವರು ಹಾಗೂ ನನ್ನ ಬೆಳವಣಿಗೆಯ ನಿರ್ಣಾಯಕ ಘಟ್ಟಗಳಲ್ಲಿ ನನಗೆ ಮಾರ್ಗದರ್ಶನ ನೀಡಿದವರು ನನ್ನ ಮಾವ ದಿ. ಪಂಜಜೆ ಶಂಕರ ಭಟ್ಟರು. ಕನ್ಯಾನ ಬೋರ್ಡ್ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿ ಸೇವೆ ಸಲ್ಲಿಸುತ್ತಿದ್ದರು. ನಾನು ಚಿಕ್ಕವಳಿದ್ದಾಗ ಅವರು ಕುಂಬಳೆಯ ಸರಕಾರಿ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ಅಧ್ಯಾಪಕರಾಗಿದ್ದು, ನಮ್ಮ ಮನೆಯಲ್ಲೇ ವಾಸವಿದ್ದರು. ನನ್ನ ಕನ್ನಡ ಶಬ್ದ ಭಂಡಾರ ಅಭಿವೃದ್ಧಿ ಹೊಂದಲು ಮತ್ತು ವ್ಯಾಕರಣಬದ್ಧವಾಗಿ ಕನ್ನಡದ ವಾಕ್ಯಗಳನ್ನು ಹೆಣೆಯಲು ಆಗ ನನಗೆ ಸಾಧ್ಯವಾದುದು ಅವರು ನೀಡಿದ ತರಬೇತಿಯಿಂದಲೇ.

ಅವರು ಬೇರೆ ಊರಿಗೆ ಹೋದ ನಂತರದಲ್ಲಿ, ನಾನು ಹೈಸ್ಕೂಲು ಸೇರಿದ ಸಂದರ್ಭ ನನ್ನನ್ನು ಅಭಿನಂದಿಸಿ ಅವರು ಬರೆದ ಪತ್ರ ಹೀಗಿತ್ತು. ‘ನೀನು ಶಾಲಾ ಅಧ್ಯಯನದ ಜೊತೆಗೆ ಸಾಹಿತ್ಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಓದಬೇಕು. ಗ್ರಂಥಾಲಯದಿಂದ ಪ್ರಸಿದ್ಧ ಸಾಹಿತಿಗಳ ಕಾದಂಬರಿಗಳನ್ನು ಒಂದೊಂದಾಗಿ ಓದು...’ ಈ ಮಾತುಗಳು ನನ್ನಲ್ಲಿ ಪ್ರೇರಣೆಯನ್ನು ತುಂಬಿದ್ದವು.

‘ಜೀವನದಲ್ಲಿ ಶಿಸ್ತಿನ ಪರಿಪಾಲನೆಗೆ ನೀನು ಮಹತ್ವ ಕೊಡಬೇಕು. ಸಮಯಕ್ಕೆ ಬೆಲೆ ಕೊಡಬೇಕು. ಯಾವುದೇ ಕೆಲಸಕ್ಕೂ ನಿರ್ದಿಷ್ಟ ಗುರಿ ಇರಬೇಕು. ಸರಿಯಾದ ಸಮಯದಲ್ಲಿ ಮಾಡಿ ಮುಗಿಸಬೇಕು. ಇಂದಿನ ಕೆಲಸ ಇಂದೇ ಮಾಡು. ದಿನದಲ್ಲಿ ಸ್ವಲ್ಪ ಸಮಯವನ್ನಾದರೂ ಧ್ಯಾನಕ್ಕೆ ಮೀಸಲಾಗಿಡು. ಆ ಸಮಯದಲ್ಲಿ ನೀನು ಎಲ್ಲೇ ಇದ್ದರೂ ನೀನಿರುವ ಜಾಗವನ್ನೇ ದೇವಮಂದಿರವೆಂದು ತಿಳಿದು ಏಕಾಗ್ರತೆಯಿಂದ ಧ್ಯಾನ ಮಾಡು...’ ಇಂಥ ನುಡಿಮುತ್ತುಗಳಿರುವ ಅನೇಕ ಪತ್ರಗಳನ್ನು ನಾನು ಅಮೂಲ್ಯ ನಿಧಿಯೆಂಬಂತೆ ಜೋಪಾನವಾಗಿರಿಸಿದ್ದೆ.

‘ನಿನಗೆ ಹೇಗಿದ್ದರೂ ಗಣಿತದಲ್ಲಿ ಆಸಕ್ತಿ ತಾನೇ? ಅದರಲ್ಲೇ ಎಂ.ಎಸ್ಸಿ. ಮಾಡಿ, ಪಿಎಚ್.ಡಿ. ಮಾಡು. ಕನ್ನಡ ಸಾಹಿತ್ಯವನ್ನು ಮಾತ್ರ ಬಿಡಬೇಡ. ಪುಸ್ತಕಗಳನ್ನು ಓದು, ಬರೆಯುವ ಹವ್ಯಾಸವನ್ನು ಮುಂದುವರಿಸು’ ಎಂಬ ಉಪದೇಶದೊಡನೆ ಹರಸಿದ್ದರು. ಮುಂದೆ ನಾನು ಎಂ.ಎಸ್ಸಿ. ಮಾಡಿ ಬೆಂಗಳೂರಿನ ಕಾಲೇಜೊಂದರಲ್ಲಿ ಗಣಿತ ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸಿದೆ. ಸಾಹಿತ್ಯವನ್ನೂ ಮುಂದುವರೆಸಿದ್ದೇನೆ.

—ಸರಸ್ವತಿ ಶಂಕರ್

## ಗುರುಬೋಧೆ

ನಾನು ಮಲ್ಲಾಡಿಹಳ್ಳಿ ಆಶ್ರಮ ಶಾಲೆಯ ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗ ಮೇಷ್ಟ್ರುಗಳ ಮನೆಗಳಿಗೂ ಹಾಲು ಹಾಕುತ್ತಿದ್ದೆ. ನನ್ನ ಪೂರ್ವಾಪರ ತಿಳಿದಿದ್ದ ನನ್ನ ಗುರು ಎನ್.ಎಸ್. ಚಿದಂಬರರಾಯರಿಗೆ ಅದಮ್ಯ ಶಿಷ್ಯಪ್ರೀತಿ. ನಾನು ಅಕ್ಕನ ಮನೆಯಲ್ಲಿ ಬೆಳೆಯುತ್ತಿರುವ, ಬಡತನದ ಮನೆಯಿಂದ ಬಂದಿದ್ದ ಹುಡುಗ ಎಂದು ಗೊತ್ತಿದ್ದರಿಂದ ಆ ಗುರುಗಳಿಗೆ ನನ್ನನ್ನು ಒಳ್ಳೆಯ ವ್ಯಕ್ತಿಯನ್ನಾಗಿ ಬೆಳೆಸಬೇಕೆಂಬ ಹಂಬಲ. ನಾನು ದುಃಖದಲ್ಲಿದ್ದ ಮನಸ್ಥಿತಿಯನ್ನು ಗ್ರಹಿಸುತ್ತಿದ್ದ ಅವರು ಒಮ್ಮೆ ನನ್ನನ್ನು ಕೂರಿಸಿಕೊಂಡು ಕೆಲವು ಮಾತುಗಳನ್ನು ಆಡಿದ್ದರು.

‘ನೋಡು, ನಿನ್ನ ಅಕ್ಕ ನಿನ್ನ ಒಳಿತನ್ನು ಬಯಸಬಹುದಾದರೂ ಉಳಿದವರು ಬಯಸಲಾರರು. ಅವರ ಮನೆಯಲ್ಲಿದ್ದೀಯೆಂದು ಪ್ರತಿ ಅನ್ನದ ಗುಕ್ಕಿಗೂ ನೋವಾಗುವಂತೆ ಮಾತನಾಡಬಹುದು. ನೀನು ಎದುರುತ್ತರ ಕೊಡಬೇಡ. ತಾಳ್ಮೆಯಿಂದ ಮೌನವಾಗಿ ಸಹಿಸು. ನಿನಗೆ ಅನ್ನ ಹಾಕಿ ಬೆಳೆಸುವ ಮನೆ ಅದು. ಓದಿನ ಕಡೆ ಮಾತ್ರ ಗಮನ ಕೊಡು.

ನಿನ್ನ ಗುರಿ ಓದು... ಓದು... ಅಷ್ಟೇ. ಕೇಳು, ನನ್ನ ಜೀವನವೂ ನಿನಗಿಂತ ಕಡೆಯಾಗಿತ್ತು. ವಾರಾನ್ನದಂತೆ ಉಂಡುಕೊಂಡು ಬೆಳೆದು ಈ ಮಟ್ಟಕ್ಕೆ ಬಂದಿರುವ ಮೇಷ್ಟ್ರು ನಾನು. ಬಡತನ ನಿನಗೆ ಜೀವನದ ಎಲ್ಲಾ ಪಾಠಗಳನ್ನು ಕಲಿಸುತ್ತದೆ. ಎಂದೂ ಅನ್ನ ಹಾಕಿದವರನ್ನು ಬೈಯಬೇಡ. ಅವರೇ ನಿನ್ನ ದೇವರಿದ್ದ ಹಾಗೆ’ ಅಂತ ಬುದ್ಧಿ ಹೇಳಿದ್ದರು. ಆ ಮಾತುಗಳು ಇಂದಿಗೂ ನನ್ನಲ್ಲಿ ಬೇರೂರಿವೆ. ಪ್ರೀತಿ, ಧೈರ್ಯ, ಸಾಂತ್ವನಗಳನ್ನು ಹೇಳಿದ್ದ ಆ ನುಡಿಗಳು ನನ್ನ ಬದುಕಿನ ದಿಕ್ಕನ್ನು ಬದಲಿಸಿವೆ. ನಾನು ತಪ್ಪಿ ನಡೆವಾಗ ಆ ಮಾತುಗಳು ಎಚ್ಚರಿಸುತ್ತಲೇ ಇರುತ್ತವೆ. ಗುರುಗಳ ಮಾತುಗಳನ್ನು ನನ್ನ ಉದಾಹರಣೆಯೊಂದಿಗೆ ನನ್ನ ಮಕ್ಕಳಿಗೂ ಹೇಳುತ್ತಿರುತ್ತೇನೆ.

—ಜಿ.ಹೆಚ್. ಸಂಕಪ್ಪ

### ಮರೆಯಲಾರದ ಗುರುಗಳ ಮಾತು

ಶಾಲಾ ಪಠ್ಯ ಮಾತ್ರವಲ್ಲದೆ ಜೀವನ ಪಾಠವನ್ನೂ ಹೇಳಿಕೊಟ್ಟ ಗುರುಗಳು ಎಂದಿಗೂ ಮನದಲ್ಲಿ ನಿಲ್ಲುವರು. ಜೀವನದಲ್ಲಿ ಗೊಂದಲ ಎದುರಾದಾಗ, ಧೈರ್ಯ ಕಳೆದುಕೊಂಡಾಗ ಅವರ ಮಾತುಗಳು ದೀವಿಗೆಯಾಗಿಯೂ ದಾರಿ ತೋರಬಲ್ಲವು. ನಿಮ್ಮ ಜೀವನದಲ್ಲಿ ನಿಮ್ಮ ಮೇಲೆ ಪ್ರಭಾವ ಬೀರಿದ ಶಿಕ್ಷಕರು ಯಾರು? ಎಂದಿಗೂ ಮನದಲ್ಲಿ ಅಚ್ಚಳಿಯದೆ ಉಳಿದ ಅವರ ಮುತ್ತಿನಂಥ ಮಾತು ಯಾವುದು? ‘ಸುಧಾ’ದೊಂದಿಗೆ ನಿಮ್ಮ ಅನುಭವವನ್ನು ಹಂಚಿಕೊಳ್ಳಬಹುದು. 150 ಪದಮಿತಿಯಲ್ಲಿ, ನುಡಿ ಅಥವಾ ಯುನಿಕೋಡ್‌ನಲ್ಲಿ ನಿಮ್ಮ ಬರಹವಿರಲಿ. ಕೊನೆಯ ದಿನಾಂಕ; ಅಕ್ಟೋಬರ್ 02. ಇಮೇಲ್– editorsu@sudha.co.in